**PW-1**

**ದಿನಾಂಕ 07.08.2024 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರಿದ ಮುಖ್ಯ ವಿಚಾರಣೆ</u> : ವಾದಿ ಪರಃ ಶ್ರೀ ಕೆ ವಿ ಕೆ ವಕೀಲರಿಂದಃ**

ದಿಃ **04.07.2022** ರಂದು ಪ್ರತಿವಾದಿ ಇನ್ನಾ ಗ್ರಾಮ ಪಂಚಾಯತ್ ರವರು ತನಗೆ ನೀಡಿದ ನೋಟಿಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**1** ಎಂದು, ದಿಃ **08.07.2022** ರಂದು ಪ್ರತಿವಾದಿ ಇನ್ನಾ ಗ್ರಾಮ ಪಂಚಾಯತ್ ರವರು ತನಗೆ ನೀಡಿದ ನೋಟಿಸ್ನನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**2** ಎಂದು, ಏಲಂ ಪ್ರಕಟಣೆಯ ನೋಟಿಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**3** ಎಂದು, ಶಾಶ್ವತ ನೊಂದಾಣಿ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು, ಪ್ರತಿವಾದಿ ಪರ ವಕೀಲರ ತಕರಾರಿನ ಮೇರೆಗೆ ನಿಪಿ-**4** ಎಂದು, ಪ್ರತಿವಾದಿ ಇನ್ನಾ ಗ್ರಾಮ ಪಂಚಾಯತ್ ರವರು ನೀಡಿದ ಉದ್ದಿಮೆ ಪರವಾನಿಗೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**5** ಎಂದು , ದಾವಾ ಕಟ್ಟಡಕ್ಕೆ ಸಂಬಂಧಿಸಿದ **3** ಭಾವಚಿತ್ರಗಳನ್ನು ಹಾಗೂ ಒಂದು ಸಿಡಿಯನ್ನು ಹಾಜರುಪಡಿಸಿದ್ದು, ಪ್ರತಿವಾದಿ ಪರ ವಕೀಲರ ತಕರಾರಿನ ಅವುಗಳನ್ನು ಒಟ್ಟಾಗಿ ನಿಪಿ-**6** ಎಂದು, ಪರವಾನಿಗೆ ನವೀಕರಿಸಲು ಪ್ರತಿವಾದಿಗೆ ಹಣ ಪಾವತಿಸಿದ ಬಗ್ಗೆ ದಿನಾಂಕ **23.03.2009** ರ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**7** ಎಂದು, ಪರವಾನಿಗೆ ನವೀಕರಿಸಲು ಪ್ರತಿವಾದಿಗೆ ಹಣ ಪಾವತಿಸಿದ ಬಗ್ಗೆ ದಿನಾಂಕ **31.03.2012** ರ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**8** ಎಂದು, ದಿಃ**21.07.2022** ರಂದು ಪ್ರತಿವಾದಿ ಮತ್ತು ಇತರರಿಗೆ ಕಳುಹಿಸಿದ ನೋಟಿಸಿನ ವಕೀಲರ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಪ್ರತಿವಾದಿ ಪರ ವಕೀಲರ ತಕರಾರಿನ ಅವುಗಳನ್ನು ಒಟ್ಟಾಗಿ ನಿಪಿ-**9** ಎಂದು, ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**10** ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿಗೊಳಿಸಬೇಕೆಂದು ಪ್ರಾರ್ಥನೆ.

<u>ಪಾಟೀ ಸವಾಲು</u> : ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಲಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.

ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ
ಕಾರ್ಕಳ